# ಮೊದಲನೆ ಕೆಂಪೇಗೌಡರು (1510-1569)

ಬೆಂಗಳೂರಿನ ನಿರ್ಮಾತೃ

# ಹಿರಿಯ ಕೆಂಪೇಗೌಡರು



# ಗಮನಿಸಿರಿ

- ಪೂರ್ವಾಧಿಕಾರಿ: ಕೆಂಪನಂಜೇಗೌಡ
- ಉತ್ತರಾಧಿಕಾರಿ: ಗಿಡ್ಡೇಗೌಡ
- ತಂದೆ-ತಾಯಿ: ಕೆಂಪನಂಜೇಗೌಡ ಮತ್ತು ಲಿಂಗಾಂಬೆ
- ಹಿರಿಯ ಕೆಂಪೇಗೌಡರು **(1510–1569)** ಅಥವಾ ಮೊದಲನೆಯ ಕೆಂಪೇಗೌಡರು ವಿಜಯನಗರ ಸಾಮ್ರಾಜ್ಯದ ಸಾಮಂತ ರಾಜ್ಯವಾಗಿದ್ದ ಯಲಹಂಕ ನಾಡಿನ ಪಾಳೇಗಾರರಾಗಿದ್ದರು. ಹಂಪಿಯ ವೈಭವವನ್ನು ಕಂಡು ಬೆರಗಾಗಿದ್ದ ಕೆಂಪೇಗೌಡರು ದೂರದೃಷ್ಟಿಯಿಂದ ನಿರ್ಮಿಸಿದ ಬೆಂಗಳೂರು ನಗರ ಕರ್ನಾಟಕ ರಾಜ್ಯದ ರಾಜಧಾನಿಯಾಗಿರುವುದಲ್ಲದೆ ಭಾರತದ ಪ್ರಮುಖ ನಗರಗಳಲ್ಲಿ ಒಂದಾಗಿದೆ.

# ವಿದ್ಯಾಭ್ಯಾಸ

- ಬಾಲ್ಯದಲ್ಲಿಯೇ ಚುರುಕಾಗಿದ್ದ ಕೆಂಪರಾಯನಿಗೆ ಅರಮನೆಯ ಪುರೋಹಿತರೂ, ಹಿತಚಿಂತಕರೂ ಆಗಿದ್ದ ಐಗಂಡಪುರದ ಮಾಧವಭಟ್ಟರ ಗುರುಕುಲಾಶ್ರಮದಲ್ಲಿ ಸಾಮಾನ್ಯ ವಿಧ್ಯಾರ್ಥಿಗಳ ಜೊತೆಯಲ್ಲಿಯೇ ವಿಧ್ಯಾಭ್ಯಾಸ ಮಾಡಿಸುತ್ತಾರೆ. ರಾಮಾಯಣ-ಮಹಾಭಾರತದ ಕಥೆಗಳು ಹಾಗೂ ತಮ್ಮ ವಂಶಸ್ಥರ ಪುಣ್ಯಕಾರ್ಯಗಳನ್ನು ಕೇಳಿ ಬೆಳೆದಿದ್ದ ಬಾಲಕನಿಗೆ ಸಹಜವಾಗಿಯೇ ವಿದ್ಯಾಭ್ಯಾಸದಲ್ಲಿ ಆಸಕ್ತಿಯಿತ್ತು.
- ಗುರುಕುಲದಲ್ಲಿ ಸಾಮಾನ್ಯ ಶಿಕ್ಷಣದ ಜೊತೆಗೆ ರಾಜೋಚಿತವಾದ ಕತ್ತಿವರಸೆ, ಕುದುರೆ ಸವಾರಿ, ಮಲ್ಲಕಾಳಗ, ರಾಜನೀತಿ, ಆರ್ಥಿಕ ತಿಳುವಳಿಕೆ ಮುಂತಾದ ವಿಷಯಗಳಲ್ಲೂ ಪರಿಣತಿ ಪಡೆಯುತ್ತಾರೆ.

# ಕೆಂಪೇಗೌಡರ ಪರಾಕ್ರಮ ಹೇಗಿತ್ತು?

- ವಿದ್ಯಾಭ್ಯಾಸ ಪೂರ್ಣಗೊಂಡ ಬಳಿಕ ಗುರುಗಳ ಆದೇಶದಂತೆ ನಾಡಿನಾದ್ಯಂತ ಸಂಚರಿಸಿ ಲೋಕಾನುಭವದ ಗಳಿಕೆ.
- ಗುರುಕುಲದಲ್ಲಿದ್ದಾಗ ಕೆಂಪರಾಯನಿಗೆ ಏಕಾಂಬರ ಶಾಸ್ತ್ರಿ, ಗುರು ನಂಜೇಶ, ವೀರಣ್ಣ ಸಹಪಾಠಿಗಳು
- ವಿಜಯದಶಮಿ ಉತ್ಸವದಲ್ಲಿ ಪಾಲ್ಗೊಂಡು ಮಲ್ಲಯುದ್ಧ ಸ್ಪರ್ಧೆಯಲ್ಲಿ ಎದುರಾಳಿ ತಿರುಮಲರಾಯರನ್ನು ಸೋಲಿಸಿದ ಕಾರಣ ಶ್ರೀಕೃಷ್ಣ ದೇವರಾಯರ ಮೆಚ್ಚುಗೆಗೆ ಪ್ರಾಪ್ತ.
- ವಿಜಯನಗರದ ಅರಸರ ಪರವಾಗಿ ಯುದ್ಧಗಳಲ್ಲಿ ಭಾಗಿ.

# ಯುವರಾಜ ಪಟ್ಟಾಭಿಷೇಕ ಮತ್ತು ಮದುವೆ

- 1528ರಲ್ಲಿ ಸೋದರಮಾವನ ಮಗಳಾದ ಚೆನ್ನಾಂಬೆಯವರೊಡನೆ ಮದುವೆ
- ಯುವರಾಜ ಪಟ್ಟಾಭಿಷೇಕ
- ಸಮಾರಂಭಕ್ಕೆ ಶ್ರೀಕೃಷ್ಣದೇವರಾಯರ ಪ್ರತಿನಿಧಿಗಳಾದಿಯಾಗಿ ಚೆನ್ನಪಟ್ಟಣ, ಶಿರಾ, ಸೋಲೂರು, ಕೆಳದಿ, ಚಿತ್ರದುರ್ಗ ಮುಂತಾದ ಸಂಸ್ಥಾನಗಳ ಪಾಳೆಯಗಾರರ ಆಗಮನ

# ಯಲಹಂಕ ನಾಡಪ್ರಭುವಾಗಿ ಅಧಿಕಾರ ಸ್ವೀಕಾರ

- **1531**ರಲ್ಲಿ ನಾಡಪ್ರಭುವಾಗಿ ಅಧಿಕಾರ ಸ್ವೀಕಾರ
- ವಿಜಯನಗರದ ಅರಸರಿಗೆ ನಿಷ್ಠೆ ಮುಂದುವರಿಕೆ
- ಅಧಿಕಾರಕ್ಕೆ ಬಂದುದು ನೆರೆಯ ಪಾಳೇಗಾರರ ಅಸೂಯೆಗೆ ಕಾರಣ.
- ವಿಜಯನಗರದ ಗಡಿಯಲ್ಲಿ ಬಹಮನಿ ಸುಲ್ತಾನರ ಸೈನ್ಯದ ಕೋಟಲೆ.
- ವಿಜಯನಗರದ ಅಖಂಡತೆಯನ್ನು ಕಾಪಾಡಲು ಗೌಡರು ಸೋದರ ಸೋಮೇಗೌಡ ಮತ್ತು ಬಸವೇಗೌಡರ ಜೊತೆ ಸೇರಿ ಹಲವು ಯುದ್ದಗಳಲ್ಲಿ ಭಾಗಿ; ಜಯ.

# ರಾಜಧಾನಿಯ ನಿರ್ಮಾಣ

- ಬಾಲ್ಯದಿಂದ ಶ್ರೀಕೃಷ್ಣದೇವರಾಯರ ಆಡಳಿತಾವಧಿಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಿರಿಯನ್ನು ಕಣ್ಣಾರೆ ಕಂಡಿದ್ದ ಕೆಂಪೇಗೌಡರಿಗೆ ತಮ್ಮ ನಾಡಿನಲ್ಲೂ ಈ ಎಲ್ಲಾ ವೈಭವಗಳನ್ನು ಮರು ಪ್ರತಿಷ್ಠಾಪಿಸುವ ಬಯಕೆ.
- ಹಲವು ಬಾರಿ ಹಂಪಿಗೆ ಭೇಟಿ ಕೊಟ್ಟು ಅಲ್ಲಿನ ವ್ಯವಸ್ಥೆಗಳ ಮನದಟ್ಟು.
- ನಗರ ನಿರ್ಮಾಣಕ್ಕೆ ಸೂಕ್ತ ಜಾಗದ ಹುಡುಕಾಟ; ಅಮಾತ್ಯ ವೀರಣ್ಣನೊಂದಿಗೆ.
- ಯಲಹಂಕದಿಂದ ದಕ್ಷಿಣಕ್ಕೆ ಹತ್ತು ಮೈಲು ದೂರದ ಪ್ರದೇಶವೊಂದಕ್ಕೆ ಆಗಮನ.
- ವಿಸ್ಮಯಕಾರಿ ಘಟನೆ ಕೆಂಪೇಗೌಡರ ಕಣ್ಣಿಗೆ!

# ಸ್ಥಳ ನಿರ್ಧಾರ ಮಾಡಿದುದರ ಹಿನ್ನೆಲೆ

- ಮೊಲವೊಂದು ತನ್ನನ್ನು ತಿನ್ನಲೆಂದು ಬಂದ ಬೇಟೆ ನಾಯಿಯೊಂದನ್ನು ಓಡಿಸಿಕೊಂಡು ಹೋಗುತ್ತಿರುವುದು ಕೆಂಪೇಗೌಡರಿಗೆ ಕಂಡುಬರುತ್ತದೆ.
- ಸಾಮಾನ್ಯ ಮೊಲವೊಂದಕ್ಕೆ ಇಷ್ಟು ಧೈರ್ಯವಿರಬೇಕಾದರೆ ಖಂಡಿತ ವೀರಭೂಮಿಯೆನಿಸಿ, ನಗರ ನಿರ್ಮಾಣಕ್ಕೆ ತೀರ್ಮಾನ.
- ಪರಿವಾರದ ಹಿರಿಯರೊಂದಿಗೆ ಸಮಾಲೋಚಿಸಿ ಒಪ್ಪಿಗೆ ಸ್ವೀಕಾರ
- ಜ್ಯೋತಿಷಿಗಳನ್ನೂ, ಭೂಗರ್ಭ-ನೀರಾವರಿ ತಜ್ಞರನ್ನೂ, ವಾಸ್ತುಶಿಲ್ಪಿಗಳನ್ನೂ ಕರೆಸಿ ಸ್ಥಳ ಮತ್ತು ಪರಿಸರದ ಪರಿಶೀಲನೆ.
- ರಾಜಧಾನಿಯ ನಿರ್ಮಾಣದ ಅನುಮತಿಗಾಗಿ ಅರಸರ ಭೇಟಿ
- ಅರಸರಿಂದ ಶುಭಕೋರಿಕೆ; ಅಗತ್ಯ ನೆರವಿನ ಭರವಸೆ.

# ರಾಜಧಾನಿಯ ನಿರ್ಮಾಣಕ್ಕೆ ಧನ ಸಂಗ್ರಹ

- ಯಲಹಂಕ ನಾಡಿನ ಸಾಮಂತರಾಗಿದ್ದ ಕೆಂಪೇಗೌಡರಿಗೆ ವಿಜಯನಗರದ ಅರಸ ಅಚ್ಯುತರಾಯರು 1532ರಲ್ಲಿ ಯಲಹಂಕ ಸೇರಿದಂತೆ ಹಳೆಯ ಬೆಂಗಳೂರು, ವರ್ತೂರು, ಬೇಗೂರು, ಹಲಸೂರು, ಕೆಂಗೇರಿ, ತಲಘಟ್ಟಪುರ, ಜಿಗಣಿ, ಕನ್ನಲ್ಲಿ, ಕುಂಬಳಗೋಡು, ಬಾಣಾವರ ಮತ್ತು ಹೆಸರುಘಟ್ಟ ಹೋಬಳಿಗಳನ್ನು ಯಲಹಂಕ ಅಮರನಾಯಕತನಕ್ಕೆ ಬಿಟ್ಟು ಕೊಟ್ಟಿರುತ್ತಾರೆ.
- ಆದರೆ ಈ ಎಲ್ಲ ಪ್ರದೇಶಗಳಿಂದ ಸಂಗ್ರಹವಾಗುತ್ತಿದ್ದ ರಾಜಾದಾಯದಲ್ಲಿ ಸ್ವಲ್ಪ ಪ್ರಮಾಣದ ಹಣವನ್ನು ಮಾತ್ರ ಸಾಮಂತರು ಬಳಸಿಕೊಂಡು ಉಳಿದಿದ್ದನ್ನು ವಿಜಯನಗರದ ಅರಸರ ಸನ್ನಿಧಾನಕ್ಕೆ ಒಪ್ಪಿಸಬೇಕಿತ್ತು.

# ಹಣ ಸಂಗ್ರಹಣೆ ಮಾಡಿದುದು ಹೇಗೆ?

- ರಾಜಧಾನಿಯ ನಿರ್ಮಾಣ ಕಾರ್ಯಕ್ಕೆ ಅಪಾರ ಹಣದ ಅವಶ್ಯಕತೆ
- ಅಗತ್ಯ ಧನಸಹಾಯಕ್ಕೆ ಜನತೆಯಲ್ಲಿ ಮನವಿ
- ಮನವಿಗೆ ಹಲಸೂರು, ಜಿಗಣಿ, ಬಾಣಾವರ, ಬೇಗೂರು, ತಲಘಟ್ಟಪುರ, ಕುಣಿಗಲ್ ಮತ್ತಿತರ ಕಡೆಗಳಿಂದ ಸ್ವಲ್ಪ ಪ್ರಮಾಣದ ಹಣ ಲಭ್ಯ.
- ನಿರ್ಮಾಣ ಕಾರ್ಯಕ್ಕೆ ಬೇಕಾದ ಸಾಮಗ್ರಿಗಳ ಪೂರೈಕೆ ಮತ್ತು ಕೋಟೆಯ ನಿರ್ಮಾಣದಲ್ಲಿ ಶ್ರಮದಾನದ ಬರವಸೆ.

# ನಿರ್ಮಾಣ ಕಾರ್ಯದ ಆರಂಭ

- ಆರಂಬಿಕ ಸಿದ್ಧತೆಗಳ ನಂತರ ಕನಸಿನ ಬೆಂಗಳೂರು ನಗರದ ನಿರ್ಮಾಣ ಕಾರ್ಯ 1537ರಲ್ಲಿ ಆರಿಂಭ.
- ಹೊನ್ನಾರು ಕಟ್ಟುವ ಆಚರಣೆಯಿಂದ ರಾಜಧಾನಿಯ ನಿರ್ಮಾಣ ಕಾರ್ಯ ಆರಂಭ.
- ಶುಭಕಾಲದಲ್ಲಿ ಈಗಿನ ದೊಡ್ಡಪೇಟೆ ಮತ್ತು ಚಿಕ್ಕಪೇಟೆ ರಸ್ತೆಗಳು ಸಂಧಿಸುವ ಪ್ರದೇಶದಲ್ಲಿ ನಾಲ್ಕು ನೇಗಿಲಿಗೆ ಆರು ಕಟ್ಟಿ ತಯಾರಾಗಿ ನಿಂತಿದ್ದ ನಾಲ್ವರು ರೈತರನ್ನೂ ನಾಲ್ಕು ದಿಕ್ಕಿಗೆ ಸಾಗುವಂತೆ ತಿಳಿಸಿದರು.
- ಪೂರ್ವಕ್ಕೆ ಹಲಸೂರು ಬಾಗಿಲು, ಪಶ್ಚಿಮಕ್ಕೆ ಅರಳೇ ಪೇಟೆ, ಉತರದಲ್ಲಿ ಯಲಹಂಕ ಮತ್ತು ದಕ್ಷಿಣದಲ್ಲಿ ಆನೆಕಲ್ (ಸಿಟಿ ಮಾರುಕಟ್ಟೆ) ಬಾಗಿಲವರೆಗೆ ಈ ಎತ್ತುಗಳು ಸಾಗಿ ನಿಂತವು
- ಅಲ್ಲೆಲ್ಲ ಗುರುತಿಗಾಗಿ ಕಲ್ಲುಗಳನ್ನು ನೆಡಲಾಯಿತು.

# ಗಮನಿಸಿರಿ

- ಎತ್ತುಗಳು ನಿಂತ ಜಾಗಗಳಲ್ಲಿ ಪ್ರಮುಖ ಪ್ರವೇಶದ್ವಾರಗಳ ನಿರ್ಮಾಣಕ್ಕೆ ತೀರ್ಮಾನ
- ಕೋಟೆಯ ಹೆಬ್ಬಾಗಿಲು ಈಗಿನ ವಿಕ್ಟೋರಿಯಾ ಆಸ್ಪತ್ರೆಯ ಬಳಿಯಲ್ಲಿ.
- ರಾಜಧಾನಿಗೆ ನವದ್ವಾರಗಳು, ದೇವಾಲಯಗಳು, ಒಂಬತ್ತು ಕೆರೆಗಳು,
- ಕೋಟೆಗೆ ನಾಲ್ಕು ಮಹಾದ್ವಾರಗಳು ಮತ್ತು  ಐದು ಕಿರುದ್ವಾರಗಳ ನಿರ್ಮಾಣ.
- ರಕ್ಷಣೆಗಾಗಿ ರಹಸ್ಯ ದ್ವಾರಗಳನಿರ್ಮಾಣ.

# ನಾಲ್ಕು ಮಹಾದ್ವಾರಗಳು ಮತ್ತು ಐದು ಕಿರು ದ್ವಾರಗಳು

1. ಪೂರ್ವಕ್ಕೆ ಹಲಸೂರು ದ್ವಾರ
2. ಪಶ್ಚಿಮಕ್ಕೆ ಸೊಂಡೆಕೊಪ್ಪದ ದ್ವಾರ
3. ಉತ್ತರಕ್ಕೆ ಯಲಹಂಕದ ದ್ವಾರ
4. ದಕ್ಷಿಣಕ್ಕೆ ಆನೆಕಲ್ ದ್ವಾರ

- ವರ್ತೂರು ಬಾಗಿಲು
- ಸರ್ಜಾಪುರದ ಬಾಗಿಲು
- ಕೆಂಗೇರಿ ಬಾಗಿಲು
- ಯಶವಂತಪುರದ ಬಾಗಿಲು
- ಕಾನಕಾನಹಳ್ಳಿ(ಕನಕಪುರ) ಬಾಗಿಲು

# ಅರಸರಿಂದ ಹಣಕಾಸಿನ ನೆರವು

- ಕೋಟೆಯ ನಿರ್ಮಾಣ ಕಾರ್ಯ ಸಾಗುತ್ತಿದ್ದಂತೆ ಅಂದರೆ, **1538**ರಲ್ಲಿ ನಾಡಪ್ರಭುಗಳ ಅಮಾತ್ಯರಾಗಿದ್ದ ಗಿಡ್ಡೇಗೌಡರು ಸಿಹಿಸುದ್ದಿಯೊಂದನ್ನು ಹೊತ್ತು ತಂದಿದ್ದರು.
- ವಿಜಯನಗರದ ಚಕ್ರವರ್ತಿ ಅಚ್ಯುತರಾಯರು **1532**ರಲ್ಲಿ ಕೆಂಪೇಗೌಡರಿಗೆ ಅಮರನಾಯಕತನಕ್ಕೆ ನೀಡಿದ್ದ ಹನ್ನೆರಡು ಹೋಬಳಿಗಳಿಂದ ಸಂಗ್ರಹವಾಗುವ ಕಂದಾಯವನ್ನು ರಾಜಧಾನಿ ನಿರ್ಮಾಣಕ್ಕೆ ಬಳಸಿಕೊಳ್ಳುವಂತೆ ತಿಳಿಸಿದ್ದರು.
- **30,000** ಪಗೋಡಗಳಷ್ಟು ಹಣ ಕಂದಾಯದ ರೂಪದಲ್ಲಿ
- ಕನಸಿನ ನಗರದ ಕೋಟೆ-ಪೇಟೆಗಳ ನಿರ್ಮಾಣ ಕಾರ್ಯಕ್ಕೆ ಯಾವ ಅಡೆತಡೆಯೂ ಉಂಟಾಗಲಿಲ್ಲ.

# ಲಕ್ಷ್ಮಿದೇವಿಯ ಬಲಿದಾನ

- ಲಕ್ಷ್ಮಿದೇವಿ ಕೆಂಪೇಗೌಡರ ಮಗ ಸೋಮಣ್ಣ ಗೌಡರ ಪತ್ನಿ.
- ಕೋಟೆಯ ದಕ್ಷಿಣದ ಬಾಗಿಲು  ಪದೇ-ಪದೇ ಬೀಳುತ್ತಿರುತ್ತದೆ
- ತುಂಬುಗರ್ಭಿಣಿಯೊಬ್ಬಳ ಬಲಿಯ ಅವಶ್ಯಕತೆ; ಜ್ಯೋತಿಷಿಗಳ ಮಾತು
- ಗರ್ಭಿಣಿಯ ಬಲಿ ಅಸಾಧ್ಯವೆಂಬ ನಿರ್ಧಾರ.
- ನಿಲ್ಲಿಸಿದ ಬಾಗಿಲು ಬೆಳಿಗ್ಗೆಯ ವೇಳೆಗೆ ಬೀಳುವುದು ಪುನರಾವರ್ತನೆ; ತೀವ್ರ ಚಿಂತೆ
- ಆಸ್ಥಾನದ ಪುರೋಹಿತರಿಂದ ಬಲಿಯ ಸಲಹೆ
- ಗೌಡರ ತೀವ್ರ ವಿರೋಧ
- ಸೊಸೆ ತಾನೇ ಬಲಿದಾನ ಮಾಡಿಕೊಳ್ಳುವ ತೀರ್ಮಾನ.
- ರಾತ್ರಿ ಯಾರಿಗೂ ತಿಳಿಯದಂತೆ ಕೋಟೆಯ ಬಾಗಿಲ ಬಳಿ ಪ್ರಾಣ ಅರ್ಪಣೆ.

# ಸ್ಮರಣೆ ಹೇಗೆ?

- ದೇಹ ತವರೂರು ಕೋರಮಂಗಲದಲ್ಲಿ ಅಂತ್ಯ ಸಂಸ್ಕಾರ.
- ಸ್ಮರಣಾರ್ಥ ಸಮಾಧಿ ಸ್ಥಳದಲ್ಲೇ ಲಕ್ಷ್ಮೀದೇವಿಯ ಗುಡಿಯ ನಿರ್ಮಾಣ
- ಇಂದಿಗೂ ಕೋರಮಂಗಲದ ಬಳಿ ಲಕ್ಷ್ಮಮ್ಮನವರ ದೇವಾಲಯ ಹಾಗೂ ಸ್ಮಾರಕವಿದೆ.

# ಪೇಟೆಗಳ ನಿರ್ಮಾಣ

- **ಸುಮಾರು 64 ಪೇಟೆಗಳ ನಿರ್ಮಾಣ**
- **ಹೆಸರುಗಳನ್ನಾಧರಿಸಿ ಪೇಟೆಗಳ ವಿಂಗಡಣೆ**

೧. ವೃತ್ತಿಯಾಧಾರಿತ ಪೇಟೆಗಳು

೨. ಜಾತಿ ಅಥವಾ ವ್ಯಕ್ತಿಯಾಧಾರಿತ ಪೇಟೆಗಳು

# ಎಣಿಸಿರಿ

ಅರಳೆಪೇಟೆ, ಅಕ್ಕಿಪೇಟೆ, ಕುಂಬಾರಪೇಟೆ, ರಾಗಿಪೇಟೆ, ಗಾಣಿಗರ ಪೇಟೆ,

ಮಡಿವಾಳ ಪೇಟೆ, ಗೊಲ್ಲರಪೇಟೆ, ಹೂವಾಡಿಗರ ಪೇಟೆ, ಮಂಡಿಪೇಟೆ, ಅಂಚೆಪೇಟೆ, ಬಳೇಪೇಟೆ, ತರಗುಪೇಟೆ, ಸುಣ್ಣಕಲ್ ಪೇಟೆ, ಮೇದಾರ ಪೇಟೆ, ಕುರುಬರ ಪೇಟೆ, ಮುತ್ಯಾಲಪೇಟೆ, ಕುಂಚಿಟಿಗರ ಪೇಟೆ, ದೊಡ್ಡಪೇಟೆ, ಚಿಕ್ಕಪೇಟೆ, ಉಪ್ಪಾರಪೇಟೆ, ಕಲ್ಲಾರಪೇಟೆ, ತಿಗಳರ ಪೇಟೆ, ಮಾಮೂಲ್ ಪೇಟೆ, ನಗರ್ತಪೇಟೆ, ಮನವರ್ತಪೇಟೆ, ಬಿನ್ನಿಪೇಟೆ

# ಯಾವ ಪೇಟೆ ಏತಕ್ಕಾಗಿ?

- ದೊಡ್ಡ ಪೇಟೆ ಸಗಟು ಮಾರಾಟಕ್ಕಾದರೆ, ಚಿಕ್ಕಪೇಟೆ ಚಿಲ್ಲರೆ ವ್ಯವಹಾರಕ್ಕಾಯಿತು.
- ಅಕ್ಕಿಪೇಟೆ, ರಾಗಿಪೇಟೆ, ಅರಳೆ ಪೇಟೆ, ತರಗು ಪೇಟೆ ದವಸ ಧಾನ್ಯಗಳ ಮಾರಾಟಕ್ಕೆ, ಗಾಣಿಗರಪೇಟೆ ಎಣ್ಣೆ ಮಾರಾಟಕ್ಕೆ, ಉಪ್ಪಾರರ ಪೇಟೆ ಉಪ್ಪಿನ ವರ್ತಕರಿಗಾದರೆ, ಕುಂಬಾರ ಪೇಟೆ ಮಡಿಕೆಗಳ ಮಾರಾಟಕ್ಕೆ.
- ತಿಗಳರ ಪೇಟೆ ಹೂವಿನ ಮಂಡಿಯಾದರೆ, ನಗರ್ತಪೇಟೆ ಚಿನ್ನ, ಬೆಳ್ಳಿ ವ್ಯಾಪಾರಿಗಳಿಗಾಯಿತು.
- ಬಳೇಪೇಟೆ ಬಳೆ, ಸರ ಮಾರಾಟಕ್ಕೆ ಮೀಸಲಾಯಿತು.

# ಕಟ್ಟಿಸಿದ ಕೆರೆಗಳು

೧. ಕೆಂಪಾಂಬುಧಿ ಕೆರೆ,  2. ಧರ್ಮಾಂಬುಧಿ ಕೆರೆ.

3. ಸಂಪಂಗಿರಾಮ ಕೆರೆ, 4. ಚೆನ್ನಮ್ಮನ ಕೆರೆ,

5. ಕಾರಂಜಿ ಕೆರೆ,  6. ಹಲಸೂರು ಕೆರೆ,

7. ಕೆಂಪಾಪುರ ಅಗ್ರಹಾರ ಕೆರೆ, 8. ಸಿದ್ದಿಕಟ್ಟೆ ಕೆರೆ,

9. ಗಿಡ್ಡಪ್ಪನ ಕೆರೆ 10. ಬೆಣ್ಣೆ ಹೊನ್ನಮ್ಮನ ಕೆರೆ

11. ಬೆಣ್ಣೆ ಹೊನ್ನಮ್ಮನ ಕೆರೆ  12. ಅಂದಲ ಕೆರೆ (ಭೋವಿ)

13. ಗುಲಗಂಜಿ ಕೆರೆ 14. ಹೊಂಬಾಳಮ್ಮನ ಕೆರೆ

15. ಮತ್ತಿಕೆರೆ

# ಗಮನವಿಟ್ಟು ಓದಿಕೊಳ್ಳಿರಿ

- ಕೆಂಪೇಗೌಡರ ನಗರ ನಿರ್ಮಾಣದ ಪ್ರಮುಖವಾದ ಅಂಶವೆಂದರೆ ರಾಜಕಾಲುವೆಗಳ ಜೋಡಣೆ. ಮಳೆ ನೀರಿನಿಂದ ಒಂದು ಕೆರೆ ತುಂಬಿದ ಕೂಡಲೇ ಈ ರಾಜಕಾಲುವೆಗಳ ಮುಖಾಂತರ ಇನ್ನೊಂದು ಕೆರೆಗೆ ನೀರು ಹರಿಸಲಾಗುತ್ತಿತ್ತು. ಈ ವ್ಯವಸ್ಥೆಯನ್ನು ನೋಡಿಕೊಳ್ಳಲು ನುರಿತ ನೀರುಗಂಟಿಗಳನ್ನು ವಿಜಯನಗರದಿಂದ ಕರೆತರಲಾಗಿತ್ತು. ಹೀಗೆ ಎಲ್ಲಾ ಕೆರೆಗಳು ತುಂಬಿದ ಮೇಲೆ ಕೋಟೆಯ ಹೊರವಲಯದ ಕಾಲುವೆಗಳಿಗೆ ಹರಿಸಲಾಗುತ್ತಿತ್ತು. ಇದೊಂದು ಕೋಟೆಯ, ನಗರದ ಮತ್ತು ನಾಗರೀಕರ ಸುರಕ್ಷೆಯ ವ್ಯವಸ್ಥೆ.

## ರಸ್ತೆಯ ಬದಿ ಮರ ಗಿಡಗಳು
## ಉದ್ಯಾನಗಳು

- ಬಹುತೇಕ ಎಲ್ಲ ರಸ್ತೆಗಳ ಎರಡೂ ಬದಿಗಳಲ್ಲಿ ಸಾಲುಮರಗಳನ್ನು ನೆಡಿಸಲಾಯಿತು.
- ಇವುಗಳಲ್ಲಿ ಬಹುಪಾಲು ಹೊಂಗೆಯ ಮರಗಳಾಗಿದ್ದು ಉಳಿದಂತೆ ಹಣ್ಣುಗಳನ್ನು ನೀಡುವಂತಹವು.
- ಹೊಂಗೆಯ ಮರಗಳ ಉಪಯೋಗಗಳೇನು?
- ದಣಿವಾರಿಸಿಕೊಳ್ಳಲು ಅಲ್ಲಲ್ಲಿ ಹೊರೆಗಲ್ಲುಗಳು
- ಹೂ, ಹಣ್ಣಿನ ತೋಟಗಳನ್ನೂ ಬೆಳೆಸಲು ಉತ್ತೇಜನ; ವಿಶ್ರಾಂತಿಗೆಂದು ಉದ್ಯಾನಗಳು.
- ನಿರ್ವಹಣೆಗೆಂದೇ ತೋಟಗಾರಿಕೆಯಲ್ಲಿ ಪ್ರವೀಣರಾಗಿದ್ದ ತಿಗಳ ಸಮುದಾಯದವರಿಗೆ ಆಶ್ರಯ.

# ಆಡಳಿತ ನಿರ್ವಹಣೆ

- ಆಸ್ಥಾನದಲ್ಲಿ ಎಂಟು ಜನ ಮಂತ್ರಿಗಳು.
- ಗ್ರಾಮಗಳ ಸುಲಲಿತ ಆಡಳಿತಕ್ಕೆ ಕೂಟ ಅಥವಾ ಗ್ರಾಮ ಪಂಚಾಯತಿ ವ್ಯವಸ್ಥೆ
- ಸಾಮಾಜಿಕ ವ್ಯವಹಾರಗಳನ್ನು ವಿಚಾರಿಸುವುದು, ತೆರಿಗೆ ವಸೂಲಾತಿ, ಕೆರೆ-ಕಟ್ಟೆ, ರಸ್ತೆಗಳ ದುರಸ್ತಿ ಕಾರ್ಯ, ದೇವಾಲಯಗಳ ಉಸ್ತುವಾರಿ, ಶಿಕ್ಷಣದ ಬಗ್ಗೆ ಜನರಲ್ಲಿ ಜಾಗೃತಿ ಇತ್ಯಾದಿಗಳು ಗ್ರಾಮ ಪಂಚಾಯ್ತಿಗಳ ಕಾರ್ಯಗಳು.
- ಆಡಳಿತ ವಿಕೇಂದ್ರಿಕರಣ ಗೊಂಡಿದ್ದರ ಪರಿಣಾಮವಾಗಿ ಶ್ಯಾನುಭೋಗ, ಪಟೇಲ, ಜೋಯಿಸ, ಬಡಗಿ, ಕಮ್ಮಾರ, ನಾಯಿಂದ, ತೋಟಿ, ತಳವಾರ, ನೀರುಗಂಟಿ, ಅಕ್ಕಸಾಲೆ, ಕುಂಬಾರ ಎಂಬ ಕಾರ್ಯ ವಿಭಾಗಗಳು.
- ಬಸವಯ್ಯ ರಾಮಗಿರಿಯ ಉಸ್ತುವಾರಿ; ಕೆಂಪಸೋಮಯ್ಯ ಶಿವಗಂಗೆಯನ್ನು ನೋಡಿಕೊಳ್ಳಲೆಂದು ನೇಮಕ.

# ತೆರಿಗೆಗಳು

- ಪ್ರಮುಖವಾಗಿ ಮನೆ ತೆರಿಗೆ, ದನದ ಸುಂಕ, ಅಂಗಡಿ ಸುಂಕ, ಮಗ್ಗದ ತೆರಿಗೆ ಹೀಗೆ ಆದಾಯವನ್ನು ಗಮನದಲ್ಲಿಟ್ಟುಕೊಂಡು ಸುಂಕ ವಿಧಿಸಲಾಗುತ್ತಿತ್ತು.
- ಸಕಾಲಿಕ ವಸೂಲಿಗಾಗಿ ಶ್ಯಾನುಭೋಗ, ಪಟೇಲ ಮತ್ತು ಕೋಲುಕಾರರ ನೇಮಕ.
- ಬಹುಪಾಲು ಹಣವು ವಿಜಯನಗರದ ಅರಸರಿಗೆ ಮತ್ತು ಸೈನ್ಯದ ಖರ್ಚಿಗೆ.
- ಉಳಿದ ತೆರಿಗೆಯ ಹಣ ಜನೋಪಯೋಗಿ ಕಾರ್ಯಗಳಿಗೆ ಬಳಕೆ.

# ದೇವಾಲಯಗಳ ನಿರ್ಮಾಣ

- ದೇವಾಲಯಗಳ ನಿರ್ಮಾಣ, ಹಳೆಯ ದೇವಾಲಯಗಳ ಜೀರ್ಣೋದ್ಧಾರ ಕಾರ್ಯಗಳು, ಅರ್ಚಕರ ಜೀವನೋಪಾಯಕ್ಕಾಗಿ ಜಮೀನು ನೀಡಿರುವುದು ಇತಿಹಾಸ.
- ಕೋಟೆಯ ಒಳಗೆ ಬಸವೇಶ್ವರ ಗುಡಿ.

1. ದೊಡ್ಡ ಬಸವನಗುಡಿ,
2. ಆಂಜನೇಯನ ಗುಡಿ
3. ಗಣಪತಿ ದೇವಾಲಯಗಳ ನಿರ್ಮಾಣ.
4. ಗವಿಗಂಗಾಧರೇಶ್ವರ ಗುಹಾಂತರ ದೇವಾಲಯದ ಅಭಿವೃದ್ಧಿ,
5. ಹಲಸೂರಿನ ಶ್ರೀ ಸೋಮೇಶ್ವರ ದೇವಾಲಯದ ಅಭಿವೃದ್ಧಿ,
7. ನಗರ ದೇವತೆ ಅಣ್ಣಮ್ಮ ಮತ್ತು
8. ಶಿವಗಂಗೆಯ ಅಭಿವೃದ್ಧಿ ಕಾರ್ಯಗಳು ಪ್ರಮುಖ

# ಕೋಟೆಗಳು

- ನಾಡಿನ ಆಯಕಟ್ಟಿನ ಸ್ಥಳಗಳಲ್ಲಿ ಕೋಟೆಗಳ ನಿರ್ಮಾಣ; ಸೈನಿಕರ ನಿಯೋಜನೆ.
- ಸೈನಿಕರ ಕುಟುಂಬದವರಿಗೆಂದೇ ಕೋಟೆಗಳ ಸಮೀಪದಲ್ಲಿ ವಸತಿ ಸೌಕರ್ಯ.
- ಏಳು ಕೋಟೆಗಳು ಪ್ರಮುಖ; ಅವೆಂದರೆ-
- ಬೆಂಗಳೂರಿನ ಕೋಟೆ
- ಮಾಗಡಿ ಕೋಟೆ
- ಸಾವನದುರ್ಗ ಕೋಟೆ ಮತ್ತು ನೆಲಪಟ್ಟಣ
- ಹುತ್ರಿದುರ್ಗದ ಏಳು ಸುತ್ತಿನ ಕೋಟೆ
- ಹುಲಿಯೂರುದುರ್ಗದ ಕೋಟೆ
- ಕುದೂರಿನ ಭೈರವನದುರ್ಗದ ಕೋಟೆ
- ರಾಮನಗರದ ರಾಮದುರ್ಗ ಕೋಟೆ

# ಕೆಂಪೇಗೌಡರ ಬಂಧನ!?

- ನೆರೆಯ ಸಾಮಂತರ ಕುತಂತ್ರದಿಂದಾಗಿ ಭೈರವನಾಣ್ಯವನ್ನು ಟಂಕಿಸಿದರೆಂಬ ಆರೋಪ
- ಅದಕ್ಕೂ ಮೊದಲೇ ಬೆಂಗಳೂರು ನಿರ್ಮಾಣ ಮತ್ತು ಕೋಟೆಗಳ ನಿರ್ಮಾಣವು ಸ್ವತಂತ್ರನಾಗುವ ಸಿದ್ಧತೆ ಎಂದು ದೂರು
- ವಿಜಯದಶಮಿಯ ಸಂದರ್ಬದಲ್ಲಿ ಬಂಧನ
- ಸುಮಾರು ಐದು ವರ್ಷಗಳ ಕಾಲ ಆನೆಗುಂದಿಯ ಸೆರೆಮನೆಯಲ್ಲಿ ಬಂಧನ
- ವಾಸವಾಂಶ ತಿಳಿದು ಬಿಡುಗಡೆ; ಆ ವೇಳೆಗೆ ವಿಜಯನಗರದ ಪತನ ಸನ್ನಿಹಿತ. ಕೆಂಪೇಗೌಡರ ಪುತ್ರರಾದಿಯಾಗಿ ಸುಮಾರು 2000ದಷ್ಟು ಸೈನಿಕರು ವಿಜಯನಗರದ ಪರವಾಗಿ ತಾಳಿಕೋಟೆಯ ಯುದ್ದದಲ್ಲಿ ಭಾಗಿ

# ಕೆಂಪೇಗೌಡರ ಮರಣ ಮತ್ತು ವೀರ ಸಮಾಧಿಯ ಹಿನ್ನೆಲೆ

- ವಿಜಯನಗರದ ಪತನಾನಂತರ ಯಲಹಂಕ ನಾಡಿನ ಮೇಲೆ ಶತ್ರುಗಳು ದಂಡೆತ್ತಿ ಬರಬಹುದೆಂದು ಶಂಕಿಸಿ ಸುತ್ತಲ ಕೋಟೆ ಕೊತ್ತಲಗಳಲ್ಲಿ ಪಹರೆಯನ್ನು ಬಿಗಿಗೊಳಿಸಿ, ಮಾಗಡಿ, ಹುತ್ರಿದುರ್ಗ, ಹುಲಿಯೂರುದುರ್ಗ ಮತ್ತು ಶಿವಗಂಗೆಗಳಲ್ಲಿ ರಕ್ಷಣೆಗೆ ಗಮನ.
- ಹೀಗಿರುವಾಗ ಕುಣಿಗಲ್ ನಿಂದ ಬರುವಾಗ ಮಾಗಡಿಗೆ ಸಮೀಪದ ಕೆಂಪಾಪುರ ಎಂಬಲ್ಲಿ ನಡೆದ ಭೀಕರ ಯುದ್ಧದಲ್ಲಿ ಮಡಿದರು
- ಕಾಲ ಸು. 1569-70.
- ಅವರು ಮಡಿದ ಸ್ಥಳದಲ್ಲಿ ಪುತ್ರ ಇಮ್ಮಡಿ ಕೆಂಪೇಗೌಡರಿಂದ ತಂದೆಯವರ ಸ್ಮರಣಾರ್ಥ ವೀರ ಸಮಾಧಿ ಗೋಪುರ ಮತ್ತು ಬಸವಣ್ಣನ ದೇವಾಲಯ ನಿರ್ಮಾಣ.

# ಕೆಂಪೆಗೌಡರ ಸಮಾಧಿ ಸಂಶೋಧನೆ

- ಮಾಗಡಿಗೆ ಸಮೀಪದ ಕೆಂಪಾಪುರ ಎಂಬಲ್ಲಿ ಸಮಾಧಿ
- ಕೆಂಪೇಗೌಡರ ಸಮಾಧಿ ಸ್ಥಳವೆಂಬ ಕಾರಣಕ್ಕೆ ಕೆಂಪಾಪುರ ಎಂಬ ಹೆಸರು.)
- (ತಿಪ್ಪಸಂದ್ರ ಹ್ಯಾಂಡ್ ಪೋಸ್ಟ್ ಮತ್ತು ಕೆಂಚನ ಹಳ್ಳಿ ನಡುವೆ ಇರುವ ಗ್ರಾಮ
- ಸು. 4 ಶತಮಾನಗಳ ಕಾಲ ಅಜ್ಞಾತವಾಗಿದ್ದ ಈ ವೀರ ಸಮಾಧಿಯು ದಿನಾಂಕ: 07/03/2015ರಂದು ಕೆಂಪೇಗೌಡರ ಇತಿಹಾಸದ ಕುರಿತು ಅಧ್ಯಯನ ನಡೆಸುತ್ತಿದ್ದ ಮರೂರು ಗ್ರಾಮದ ಪ್ರಶಾಂತರವರಿಗೆ ಕಂಡುಬಂದಿರುತ್ತದೆ.
- ಸೆಪ್ಟೆಂಬರ್ 3ರಂದು ವಿಜಯವಾಣಿಯ ರಾಮನಗರ ಆವೃತ್ತಿಯಲ್ಲಿ ಮತ್ತು ಸೆಪ್ಟೆಂಬರ್ 9ರಂದು Bangalore Mirror ಪತ್ರಿಕೆಯಲ್ಲಿ ಮೊದಲ ಬಾರಿಗೆ ವರದಿಗಳು ಪ್ರಕಟವಾದವು.

# ಸಮಾಧಿಯ ದೃಢೀಕರಣ ಹೇಗೆ?

- ಗೋಪುರದ ಮೇಲಿದ್ದ

"ಪಿರಿಯ ಕೆಂಪೆಯಗೌಡರಯ್ಯನವರು ಕುಣಿಗಿಲಿಂದ ಬಂದು ಯಿ ಬಳಿ ಜಗಳವನು ಮಾಡಿ ಐಕ್ಯವಾಗಿ ಕೈಲಾಸಕೆ ಪೋದ ಸ್ಥಳ"

ಎಂಬ ಶಾಸನದ ಚಿತ್ರಗಳನ್ನು ಸಾಮಾಜಿಕ ಮಾಧ್ಯಮ ಹಾಗೂ ಪತ್ರಿಕೆಗಳಿಗೆ ಕಳುಹಿಸುವ ಮೂಲಕ ಇತಿಹಾಸಕಾರರುಗಳ ಗಮನ ಸೆಳೆಯುತ್ತಾರೆ.

ಇದಕ್ಕೆ ಸ್ಪಂದಿಸಿದ ಕರ್ನಾಟಕ ಇತಿಹಾಸ ಅಕಾಡೆಮಿ ಇದು ಕೆಂಪೇಗೌಡರ ಸಮಾಧಿಯೆಂದು ಸ್ಪಷ್ಟಿಕರಿಸಿರುತ್ತದೆ.

- ಬಿಬಿಎಂಪಿಯ ಮೇಯರ್ ರವರ ಆದೇಶದ ಮೆರೆಗೆ ದಿನಾಂಕ **31/10/2015**ರಂದು ಬೆಂಗಳೂರು ವಿವಿಯ ಕೆಂ.ಮಾ. ಅಧ್ಯಯನ ಸಮಿತಿಯು ಇದು ಕೆಂಪೇಗೌಡರ ವೀರ ಸಮಾಧಿ ಎಂದು ದೃಢಪಡಿಸಿರುತ್ತದೆ.